**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ10001/2022**

ಪಿಡಬ್ಲೂ-09

ಸಿಡಬ್ಲೂ-11

| | | |
|---|---|---|
| ಸಾಕ್ಷಿ ಹೆಸರು | - | ಸಂಧ್ಯಾ |
| ಗಂಡನ ಹೆಸರು | - | ಮಹೇಶ |
| ವಯಸ್ಸು | - | 26 ವರ್ಷ |
| ಉದ್ಯೋಗ | - | ಗೃಹಿಣಿ |
| ವಾಸಃ | - | ಗಾಡಿಕೊಪ್ಪ, ಶಿವಮೊಗ್ಗ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 28-06-2024**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ಪ್ರಾ ಸಾ -1 ಮತ್ತು ಪ್ರಾ ಸಾ8 ನನ್ನ ತಮ್ಮಂದಿರು. ಪ್ರಾ ಸಾ 2 ಪ್ರಾ ಸಾ -1 ರವರ ಸ್ನೇಹಿತ. ನನಗೆ 1 ನೇ ಆರೋಪಿಯ ಪರಿಚಯ ಇದೆ. ನನ್ನ ತಂದೆ ಸಿದ್ದಾನಾಯ್ಕ ರವರು ಹಮಾಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಮನೆ ಕೆಲಸ ಮಾಡುತ್ತಿದ್ದರು. ನನಗೆ ದೀಪಾ ಮತ್ತು ಸೌಮ್ಯ ಎಂಬ ಅಕ್ಕತಂಗಿಯರು ಇದ್ದು ಇಬ್ಬರಿಗೂ ಮದುವೆ ಆಗಿರುತ್ತದೆ. ನಾನು ಸಾಗರದ ಶಾಹಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಬಸ್ಸಿನಲ್ಲಿ ಹೋಗಿ ಬಂದು ಮಾಡುತ್ತಿದ್ದೆ. ನಮ್ಮ ಮನೆಯಿಂದ ನಡೆದುಕೊಂಡು ಬಂದು ರಿಪ್ಪನ್ ಪೇಟೆ ಸರ್ಕಲ್ ನಲ್ಲಿ ಬಸ್ ನ್ನು ಹತ್ತುತ್ತಿದ್ದೆ. ನಾನು ನಮ್ಮ ಮನೆಯಿಂದ ನಡೆದುಕೊಂಡು ಬಂದು ಹೋಗಿ ಮಾಡುವಾಗ 1 ನೇ ಆರೋಪಿಯು ನನಗೆ ಹಿಂಬಾಲಿಸಿ ಚುಡಾಯಿಸುತ್ತಿದ್ದ, ಪ್ರೀತಿ ಮಾಡುತ್ತೇನೆ, ನಿನ್ನನ್ನು ಮದುವೆ ಆಗುತ್ತೇನೆ ಎಂದು ಹೇಳುತ್ತಿದ್ದ. ಆಗ ನಾನು 1 ನೇ ಆರೋಪಿಗೆ ನನ್ನನ್ನು ಹಿಂಬಾಲಿಸಬೇಡ ಎಂದು ಹೇಳಿದ್ದು ಆತ ಕೇಳಲಿಲ್ಲ. ಸದರಿ ವಿಷಯವನ್ನು ನಾನು ನನ್ನ ತಂದೆ ತಾಯಿ ಮತ್ತು ನನ್ನ ಕುಟುಂಬದವರಿಗೆ ಹೇಳಿರುತ್ತೇನೆ. ನಂತರ ನನ್ನ ತಮ್ಮ ಪ್ರಾ

ಸಾ –1  ಮತ್ತು ಫ್ರಾ ಸಾ 8 ರವರು 1 ನೇ ಆರೋಪಿಗೆ ನನ್ನ ತಂಟೆಗೆ ಬರದಂತೆ ಬುದ್ಧಿವಾದ ಹೇಳಿರುತ್ತಾರೆ.

ದಿನಾಂಕಃ10–09–2019 ರಂದು ರಿಪ್ಪನ್ ಪೇಟೆಯ ಹಿಂದೂ ಮಹಾಸ ಭಾ ಗಣಪತಿಯ ಮೆರವಣಿಗೆ ಇತ್ತು, ಮನೆಯಲ್ಲಿ ಎಲ್ಲರೂ ಹಬ್ಬದ ರೀತಿ ಆಚರಣೆ ಮಾಡಿದ್ದರು. ಗಣಪತಿ ವಿಸರ್ಜನೆ ಮಾಡುವ ಸಮಯದಲ್ಲಿ ನನ್ನ ತಮ್ಮಂದಿರು ಫ್ರಾ ಸಾ –7 ಮತ್ತು ಫ್ರಾ ಸಾ8 ರವರು ಮತ್ತು ಅವರ ಸ್ನೇಹಿತರು ಹೋಗಿದ್ದರು. ನಂತರ ಶಿವಮಂದಿರದ ರವಿ ಇವರ ಅಂಗಡಿ ಹತ್ತಿರ ಆರೋಪಿತರು ಫ್ರಾ ಸಾ –1 ಮತ್ತು ಫ್ರಾ ಸಾ 2 ರವರಿಗೆ  ನನ್ನ ವಿಚಾರದಲ್ಲಿ ಸಾಯಿಸುವ ಉದ್ದೇಶದಿಂದ 1 ನೇ ಆರೋಪಿಯು ನನ್ನ ತಮ್ಮನಿಗೆ ಚಾಕುವನ್ನು ಎದೆಗೆ  ಹಾಕಿರುತ್ತಾನೆ.  ಫ್ರಾ ಸಾ –7 ರವರಿಗೆ 2 ನೇ ಆರೋಪಿಯು ಚಾಕುವಿನಿಂದ ಸೊಂಟಕ್ಕೆ ಬೆನ್ನಿಗೆ ಹೊಟ್ಟೆಗೆ ಚುಚ್ಚಿದ್ದನು, ಉಳಿದ ಆರೋಪಿತರು ಅವರಿಗೆ ಕಾಲಿನಿಂದ ಒದ್ದಿದ್ದರು.

ನಂತರ ಫ್ರಾ ಸಾ –1 ಮತ್ತು ಫ್ರಾ ಸಾ 2 ರವರನ್ನು ರಿಪ್ಪನ್ ಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ನಂತರ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೋಲಿಸೇರು ಈ ಬಗ್ಗೆ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 2 ರಿಂದ 4 ನೇ ಆರೋಪಿತರು  ನ್ಯಾಯಾಲಯದಲ್ಲಿ ಹಾಜರು ಇದ್ದು ಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (1 ನೇ ಆರೋಪಿ ಗೈರು ಹಾಜರು ಇದ್ದು ಆರೋಪಿ ಪರ ವಕೀಲರು ಇ ಪಿ ಹಾಕಿದ್ದು 1 ನೇ ಆರೋಪಿ ಪರ ವಕೀಲರು ಗುರುತಿಗಾಗಿ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ)

**ಪಾಟೀ ಸವಾಲುಃ 2 ಆರೋಪಿತನ ಪರ ವಕೀಲರಿಂದಃ**

ನನಾು ಶಾಹಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುವ ಬಗ್ಗೆ ನಾನು ಪೋಲೀಸರಿಗಾಗಲೀ ನ್ಯಾಯಾಲಯಕ್ಕಾಗಲೀ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ದಿನಾಲೂ ರಿಪ್ಪನ್ ಪೇಟೆಯಿಂದ ಸಾಗರಕ್ಕೆ ಬಸ್ ನಲ್ಲಿ ಓಡಾಡುತ್ತಿದ್ದ ಬಗ್ಗೆ ನನ್ನ ಬಳಿ ಬಸ್ ಪಾಸ್ ಇಲ್ಲ.  ಬಸ್ಸಿನಲ್ಲಿ ಸಿ ಮಾಡುತ್ತಿದ್ದರು.  1 ನೇ ಆರೋಪಿ ಪ್ರೀತಿ ಪ್ರೇಮ ಮದುವೆ ಎಂದು ತೊಂದರೆ ಕೊಡುವ ಬಗ್ಗೆ ಪೋಲಿಸೇರಿಗೆ ದೂರನ್ನು ಕೊಟ್ಟಿಲ್ಲ ಆದರೆ ಮನೆಯಲ್ಲಿ ಹೇಳಿರುತ್ತೇನೆ. 1 ನೇ ಆರೋಪಿ ಚಾಕು ವಿನಿಂದ ಚುಚ್ಚುವುದನ್ನು ಖುದ್ದಾಗಿ ನೋಡಿಲ್ಲ ಈ ಬಗ್ಗೆ

ನನಗೆ ಬೇರೆಯವರು ಹೇಳಿದ್ದರಿಂದ ಗೊತ್ತಾಗಿರುತ್ತದೆ. ಈ ವಿಚಾರವನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಹೌದು. ಫ್ರಾಸಾ –1 ಮತ್ತು ಫ್ರಾ ಸಾ 7 ರವರಿಗೆ ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ನಾನು ಇದ್ದೆನು. ಸದರಿಯವರು ಚಿಕಿತ್ಸೆ ಪಡೆಯುವ ಸಮಯದಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ 2–3 ಸಲ ಹೋಗಿ ನಾನು ನೋಡಿಕೊಂಡು ಹೋಗುತ್ತಿದ್ದೆನು. ಆರೋಪಿತರು ನನಗೆ ಯಾರೂ ಹೊಡೆದಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಪೋಲೀಸರ ಮುಂದೆ ಆರೋಪಿತರು ನನಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿಕೆ ಕೊಟ್ಟಿಲ್ಲ. 2 ನೇ ಆರೋಪಿ ಘಪಿಟನೆಯ ಸಮಯದಲ್ಲಿ ಇರಲಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆಸ ರಿಯಲ್ಲ. ಗಣಪತಿ ಮೆರವಣಿಗೆಗೂ 2 ನೇ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾರೂ ಈ ಘಟನೆಯಲ್ಲಿ ಭಾಗವಹಿಸಿರಲಿಲ್ಲ ಫ್ರಾ ಸಾ –1 ಮತ್ತು ಫ್ರಾ ಸಾ–7 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 4 ಆರೋಪಿತನ ಪರ ವಕೀಲರಿಂದಃ</u>**

ಫ್ರಾ ಸಾ 8 ರವರಿಗೆ ಚಿಕನ್ ಅಂಗಡಿ ಇದೆ. ಫ್ರಾ ಸಾ 8 ರವರ ಮೇಲೆ ಪೋಕ್ಸೋ ಕೇಸ್ ದಾಖಲಾಗಿದೆ ಎಂದರೆ ಹೌದು.

ಫ್ರಾ ಸಾ –1 ಮತ್ತು ಫ್ರಾ ಸಾ 8 ರವರನ್ನು ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋದ ಬಗ್ಗೆ ತಿಳಿಯಿತು ಎಂದು ಹಾಗೂ ನನ್ನ ಮೇಲೆ ಹಲ್ಲೆ ಮಾಡಿದವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ. ಪೋಲಿಸೇರಿಗೆ ನೀಡಿದಂತಹ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿಲ್ಲ. ನಾನು ಪೋಲೀಸ್ ಠಾಣೆಯಲ್ಲಿ ನನ್ನ ಹೇಳಿಕೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪೋಲೀಸರು ಬರವಣಿಗೆ ಮಾಡಿಕೊಂಡಿರುತ್ತಾರೆ. ನನ್ನ ಹೇಳಿಕೆಯನ್ನು ಪೋಲೀಸರು ಟೈಪ್ ಮಾಡಿಲ್ಲ ಎಂದರೆ ಹೌದು. ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ನಾನು ಪೋಲಿಸೇರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಗೆ ನಾವು ಎಷ್ಟು ಜನ ಹೋಗಿದ್ದೆವು ಎಂದು ಗೊತ್ತಿಲ್ಲ. ಆರೋಪಿತರ ಹೆಸರು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ.

4 ನೇ ಆರೋಪಿ ಮೆರವಣಿಗೆ ಗೆ ಹಾಗೂ ವಿಸರ್ಜನೆಗೆ ಬಂದಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಮತ್ತು 4 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ಆರೋಪಿತನ ಪರ ವಕೀಲರಿಂದಃ

3 ನೇ ಆರೋಪಿ ಪರ ವಕೀಲರು ಉಳಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

ಪಾಟೀ ಸವಾಲುಃ 1 ಆರೋಪಿತನ ಪರ ವಕೀಲರಿಂದಃ

1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).